ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು) :—

1. ಬಂದಿದೆ.

2. ತುರುವೇಕೆರೆ ಪಟ್ಟಣದ ವಿದ್ಯಾನಗರ, ಶಕ್ತಿನಗರ ಹಾಗೂ ಬಸವೇಶ್ವರ ನಗರ ಬಡಾವಣೆಗಳಲ್ಲಿ ಚರಂಡಿ ನಿರ್ಮಾಣ ಕಾಮಗಾರಿಗಳು ಪ್ರಗತಿಯಲ್ಲಿವೆ.

3. ಮೇಲಿನ ಕಾರ್ಯಕ್ರಮದ ಉಸ್ತುವಾರಿಗಾಗಿ ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಕನ್ಸಲ್‌ಟೆಂಟ್ ಆಗಿ ಮೆ. ಸಿ.ಇ.ಎನ್.(ಇಂಡಿಯಾ) ಲಿಮಿಟೆಡ್ ಇವರನ್ನು ಸರ್ಕಾರದ ವತಿಯಿಂದ ನೇಮಿಸಲಾಗಿದೆ. ಸಾರ್ವಜನಿಕರು ದೂರು ಸಲ್ಲಿಸುವ ಮೊದಲೇ ಗುತ್ತಿಗೆದಾರನ ಸಾಮಗ್ರಿ ಸಂಗ್ರಾಹಕನು ಚಪ್ಪಡಿ ಕಲ್ಲುಗಳನ್ನು ಸರಬರಾಜು ಮಾಡಿದಾಗ ತಪಶೀಲು ಪಟ್ಟಿಯ ಪ್ರಕಾರ ಇಲ್ಲದಿರುವ ಪ್ರಯುಕ್ತ ಕನ್ಸಲ್ಟೆಂಟ್‌ನವರು ನಿರಾಕರಿಸಿದ್ದು, ತಪಶೀಲು ಪಟ್ಟಿಯ ಪ್ರಕಾರ ಕಲ್ಲುಗಳನ್ನು ಮರು ಸರಬರಾಜು ಮಾಡಲು ಈಗಾಗಲೇ ಸೂಚಿಸಲಾಗಿದೆ. ಕೆಲಸಗಳನ್ನು ಸರಿಪಡಿಸಿದ ನಂತರವೇ ಗುತ್ತಿಗೆದಾರರಿಗೆ ಬಿಲ್ ಮಾಡಲು ಕನ್ಸಲ್ಟೆಂಟ್‌ರವರಿಗೆ ಈಗಾಗಲೇ ಸೂಚಿಸಲಾಗಿದೆ.

ಬಸವಕಲ್ಯಾಣ ಮತಕ್ಷೇತ್ರದಲ್ಲಿನ ತಾಂಡಾಗಳ ಅಭಿವೃದ್ಧಿ

2676 (3175) ಶ್ರೀ ಎಂ.ಜಿ. ಮುಳೆ (ಬಸವಕಲ್ಯಾಣ) :— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬಸವಕಲ್ಯಾಣ ಮತಕ್ಷೇತ್ರದಲ್ಲಿನ ವ್ಯಾಪ್ತಿಯಲ್ಲಿ ಬರುವ ತಾಂಡಾಗಳ ಸಂಖ್ಯೆ ಎಷ್ಟು;

ಆ) ಇತ್ತೀಚೆಗೆ ಗುಲ್ಬರ್ಗಾ ಜಿಲ್ಲೆಯಲ್ಲಿ ನಡೆದಿರುವ ತಾಂಡಾಗಳ ಪರಿಸ್ಥಿತಿಯ ಹಿನ್ನಲೆಯಲ್ಲಿ, ಬಸವಕಲ್ಯಾಣದಲ್ಲಿರುವ ತಾಂಡಾಗಳನ್ನು ಅಭಿವೃದ್ಧಿಪಡಿಸಲು ಕೈಗೊಂಡಿರುವ ಕ್ರಮಗಳೇನು;

ಇ) ಈ ತಾಂಡಾಗಳಲ್ಲಿ ವಾಸಿಸುತ್ತಿರುವ ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗಾಗಿ ಸರ್ಕಾರ ಯಾವುದಾದರೂ ವಿಶೇಷ ಯೋಜನೆ ಹಮ್ಮಿಕೊಂಡಿದೆಯೇ?

ಈ) ಹಾಗಿದ್ದರೆ ಆ ಯೋಜನೆಯ ರೂಪುರೇಷೆಗಳೇನು; ಹಾಗೂ ಯಾವಾಗ ಕಾರ್ಯರೂಪಕ್ಕೆ ತರಲಾಗುವುದು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :—

ಅ) ಬಸವಕಲ್ಯಾಣ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ತಾಂಡಾಗಳ ಸಂಖ್ಯೆ 34.

ಆ) ಯಾವುದೇ ಹೊಸ ಕಾರ್ಯಕ್ರಮ ಕೈಗೊಂಡಿಲ್ಲ. ಆದರೆ, ಚಾಲ್ತಿಯಲ್ಲಿರುವ ಯೋಜನೆಗಳಲ್ಲಿ, ಫಲಾನುಭವಿಗಳಿದ್ದರೆ, ಪ್ರಯೋಜನ ಪಡೆಯುತ್ತಾರೆ.

ಇ) ಇಲ್ಲ

ಈ) ಉದ್ಭವಿಸುವುದಿಲ್ಲ.